

ನೆರಳಿನಲ್ಲಿ ಕೊನೆಗಾಣುವುದು ಚೆನ್ನಲ್ಲವೆಂತಲೇ ಅವಳ ವಾದ. ಇಬ್ಬರೂ, ತಮ್ಮ ಇಪ್ಪತ್ತೈದು ವರ್ಷಗಳ ಸ್ವಂತ ಜಂಟಿಯುದ್ದಿಮೆಯಿಂದಾಗಿ ಉಳಿದ ಬದುಕು ನೂಕುವಷ್ಟು ಹಣ ಕೂಡಿಟ್ಟಿರುವವರಾಗಿ, ಆ ಕುರಿತೇನೂ ಯೋಚನೆಯಿಲ್ಲ... ಸಾಕಷ್ಟು ಸಾಹಿತ್ಯಾಸಕ್ತಿಯಿಟ್ಟುಕೊಂಡು, ಭಾಷೆಯೆಂಬ ಭಾಷೆಯಲ್ಲೂ ಇನ್ನಿರದ ಆಸ್ಥೆಯನ್ನೂ ಒಳಗೊಂಡು, ದಿನ ಸವೆಯಿಸುವ ಸಲುವಾಗಿ ಗೈಯುವ ಅಧ್ಯಯನದೋಪಾದಿಯ ಓದಿನಿಂದಾಗಿ, ಬೌದ್ಧಿಕವಾಗಿ, ಬಲು ಎತ್ತರದಲ್ಲಿರುವ ರುದ್ರನೀಲ ಥಾಪಸೆ ಮಡದಿಯೊಡನೆಯೂ ತನ್ನೀ ಓದುಬೋಧೆಗಳ ಕುರಿತಾಗಿ ಸಾಕಷ್ಟು ಚರ್ಚಿಸುತ್ತಾನಾಗಿ, ಅವಳೂ ತಂತಾನು ಎತ್ತರಿಸಿಕೊಂಡಿದ್ದಾಳೆ. ಅವನಷ್ಟಲ್ಲದಿದ್ದರೂ ಇವಳ ಬೌದ್ಧಿಕ ನಿಲುಕೆಟುಕೂ ಕಡಿಮೆಯೇನಿಲ್ಲ. ಇನ್ನು, ಬೆಂಗಳೂರು–ಮೈಸೂರು–ತುಮಕೂರು–ಹೊಸೂರು... ಈ ಶಹರಗಳಲ್ಲಿರುವ ಒಟ್ಟಿಪ್ಪತ್ತೂ ಮತ್ತೊಂದು ಆರ್ಕಿಟೆಕ್ಚರಿನ ಶಾಲೆಗಳ ಮಂದಿ, ಗಂಡಹೆಂಡಿರನ್ನು ಸಂದರ್ಶಕ ಅಧ್ಯಾಪಕರಾಗಿ, ಆಗಾಗ ಕರೆಯುತ್ತಾರಾಗಿ, ತಿಂಗಳ ಖರ್ಚು ತೂಗುವಷ್ಟು ದುಡ್ಡು ಒಲ್ಲೆಂದರೂ ಆಗಿಬರುತ್ತದೆ. ಎಂತಲೇ, ಇನ್ನುಳಿದಂತೆ, ಇಬ್ಬರಿಗೂ ಬದುಕನ್ನು ದೂರುವ ಬಾಬತ್ತೇ ಇಲ್ಲ,... ಹಾಗೆ ದೂರಾಡುವುದೇ ಆದಲ್ಲಿ ಬೆಂಗಳೂರಿಗೆ ಬಂದು, ಬನ್ನೇರುಘಟ್ಟ ರಸ್ತೆಯ ಸನಿಹದೊಂದು ಬಡಾವಣೆಯಲ್ಲಿ ನೆಲೆಸಿ, ಇಪ್ಪತ್ತೆಂಟು ವಯಸ್ಸು ತೀರಿಯೂ, ಇಬ್ಬರಿಗೂ ಆಡುಗನ್ನಡ ಮಾತ್ರ ಅಷ್ಟಕ್ಕಷ್ಟೇ ಎಂಬುದು ಮಾತ್ರ, ಮನೆಯ ನೆರೆಹೊರೆಯಲ್ಲಿರುವ ಸೌತಿಂಡಿಯನ್ನುಗಳ ತಗಾದೆಯೆನ್ನಬಹುದು. ಹಾಗಂತ ಮನೆಯ ಅನುದಿನದ 'ವಾರ್ತೆ'ಯ ಸಲುವಿನಲ್ಲಿರುವ ಕೆಲಸದವರನ್ನು